ಕನ್ನಡಪ್ರಭ

ದಿನಾಂಕ 16/03/2023

# ಬೇಸಿಗೆ ಕಾಲದಲ್ಲಿ ಟ್ಯಾಂಕರ್ ನೀರು ಪೂರೈಕೆ

## ಕೊಳವೆ ಬಾವಿಗಳ ಮೂಲಕ ಹೆಚ್ಚಿನ ನೀರು ಪೂರೈಕೆ | ಜನರು ನೀರನ್ನು ಮಿತವಾಗಿ ಬಳಸಿ: ಜಲ ಮಂಡಳಿ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಬೇಸಿಗೆ ಅವಧಿಯಲ್ಲಿ ಬೆಂಗಳೂರಿನಲ್ಲಿ ನೀರಿನಸಮಸ್ಯೆ ಉಂಟಾಗದಂತೆಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ನೀರಿನ ಟ್ಯಾಂಕರ್ ಮೂಲಕ ನೀರು ಪೂರೈಕೆಕ್ರಮಕೈಗೊಂಡಿದ್ದು,ಸಾರ್ವಜನಿಕರು ನೀರನ್ನು ಮಿತವಾಗಿ ಬಳಕೆ ಮಾಡಬೇಕು ಎಂದು ಕೋರಿದೆ.

ಪ್ರತಿದಿನ ಬೆಂಗಳೂರಿಗೆ 1,450 ದಶ ಲಕ್ಷ ಲೀಟರ್ ಕಾವೇರಿ ನೀರು ಪೂರೈಕೆ ಮಾಡಲಾಗುತ್ತಿದೆ. ನಗರದಲ್ಲಿ 1.20 ಕೋಟಿಗಿಂತ ಅಧಿಕ ಜನಸಂಖ್ಯೆ ಹೊಂದಿರುವುದರಿಂದ ಬೇಸಿಗೆ ಅವಧಿಯಲ್ಲಿ ನೀರಿನ ಅಭಾವ ಉಂಟಾಗುವ ಸಾಧ್ಯತೆ ಇದೆ. ಹೀಗಾಗಿ, ನೀರಿನಕೊರತೆಉಂಟಾಗುವ ಪ್ರದೇಶಗಳಿಗೆ ಪೂರೈಸಲು ಜಲಮಂಡಳಿಯಿಂದ 68 ಲಾರಿ ಟ್ಯಾಂಕರ್ ವ್ಯವಸ್ಥೆ. ಜತೆಗೆ, 10,710 ಕೊಳವೆ ಬಾವಿಗಳಿಂದ ಹೆಚ್ಚಿನ ಪ್ರಮಾಣ ನೀರು ಪೂರೈಕೆ ಮಾಡಲಾಗುತ್ತಿದೆ. ಮಂಡಳಿಯ 35 ಉಪ ವಿಭಾಗದಲ್ಲಿ ನೀರಿನ ಕೊರತೆ ನಿವಾರಿಸಲು ನೋಡಲ್ ಅಧಿಕಾರಿಗಳನ್ನು ನೇಮಿಸಲಾಗಿದೆ ಎಂದು ಜಲಮಂಡಳಿ ತಿಳಿಸಿದೆ.

### ನೀರು ಬಳಕೆ ಸೂಚನೆ

ಕಾವೇರಿ ನೀರನ್ನು ಮಿತವಾಗಿ ಬಳಸಬೇಕು. ಕಾವೇರಿ ನೀರನ್ನು ಕುಡಿಯಲು ಹಾಗೂ ಗೃಹ ಬಳಕೆಗೆ ಮಾತ್ರ ಬಳಕೆ ಮಾಡುವುದು. ಇನ್ನಿತರೆ ಕಾರ್ಯಗಳಿಗೆ ಕೊಳವೆ ಬಾವಿ ನೀರು ಮತ್ತು ತ್ಯಾಜ್ಯ ನೀರು ಘಟಕಗಳಿಂದ ಸಂಸ್ಕರಿಸಿದ ನೀರು ಬಳಕೆ ಮಾಡುವುದು. ನೆಲತೊಟ್ಟಿ ಮತ್ತು ಜಲಸಂಗ್ರಹಾರ ತೊಟ್ಟಿಗಳಲ್ಲಿ ಹಾಗೂ ನಲ್ಲಿಗಳಲ್ಲಿ ನೀರು ಸೋರಿಕೆ ಆಗದಂತೆ ಕ್ರಮ ವಹಿಸಬೇಕು ಎಂದು ಮನವಿ ಮಾಡಿದೆ.

### ನೀರಿಗಾಗಿ ಕರೆ ಮಾಡಿ

ಒಂದು ವೇಳೆ ನಗರದ ರಸ್ತೆಗಳಲ್ಲಿ ನೀರಿನ ಕೊರತೆ ಕಂಡು ಬಂದರೆ **1916** ದೂರವಾಣಿ ಸಂಖ್ಯೆ ಹಾಗೂ ವಾಟ್ ಆಪ್ ಸಂಖ್ಯೆ **87622 28888** ಮೂಲಕ ಜಲಮಂಡಳಿಗೆ ಮಾಹಿತಿ ನೀಡುವಂತೆ ಕೋರಲಾಗಿದೆ.

# ಕುಡಿವ ನೀರಿನ ಅಭಾವ ತಪ್ಪಿಸಲು ನೋಡಲ್ ಅಧಿಕಾರಿಗಳ ನೇಮಕ

ಉದಯವಾಣಿ

ದಿನಾಂಕ 16/03/2023

**ಬೆಂಗಳೂರು:** ನಗರದಲ್ಲಿ ಬೇಸಿಗೆ ಅವಧಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗುವ ಪ್ರದೇಶಗಳಲ್ಲಿ ನೀರು ಪೂರೈಸುವ ಸಲುವಾಗಿ ಜಲಮಂಡಳಿಯ 35 ಉಪವಿಭಾಗಕ್ಕೂ ಪ್ರತ್ಯೇಕ ನೋಡಲ್ ಅಧಿಕಾರಿಗಳನ್ನು ನೇಮಿಸಲಾಗಿದೆ.

ಬೆಂಗಳೂರಿಗೆ ಪ್ರತಿದಿನ 1,450 ದಶಲಕ್ಷ ಲೀಟರ್ ಕಾವೇರಿ ನೀರು ಪೂರೈಸಲಾಗುತ್ತಿದೆ. ಆದರೆ, ಈ ಬಾರಿಯ ಬೇಸಿಗೆಯಲ್ಲಿ ನೀರಿನ ಅಭಾವ ಉಂಟಾಗುವ ಸಾಧ್ಯತೆಗಳಿವೆ. ಹೀಗಾಗಿ ನೀರಿನ ಕೊರತೆ ಉಂಟಾಗುವ ಪ್ರದೇಶಗಳಿಗೆ ಜಲಮಂಡಳಿಯಿಂದ 68 ಟ್ಯಾಂಕರ್‌ಗಳ ಮೂಲಕ ನೀರು ಪೂರೈಕೆ ಮಾಡಲಾಗುವುದು. ಜತೆಗೆ 10,710 ಕೊಳವೆ ಬಾವಿಗಳಿಂದ ನೀರು ಪಡೆದು ಪೂರೈಸಲಾಗುವುದು. ಜಲಮಂಡಳಿಯ 35 ಉಪವಿಭಾಗಗಳಲ್ಲಿ ನೀರಿನ ಕೊರತೆ ಬಗ್ಗೆ ಮೇಲ್ವಿಚಾರಣೆ ಮಾಡಲು ನೋಡಲ್ ಅಧಿಕಾರಿಗಳನ್ನು ನೇಮಿಸಲಾಗಿದೆ. ಈ ಅಧಿಕಾರಿಗಳು ನೀರಿನ ಸಮಸ್ಯೆ ನಿವಾರಿಸುವುದಕ್ಕೆ ಕ್ರಮವಹಿಸಲಿದ್ದಾರೆ ಎಂದು ಜಲಮಂಡಳಿ ತಿಳಿಸಿದೆ.

### ನೀರು ಸೋರಿಕೆ ಕಂಡರೆ ವಾಟ್ಸಾಪ್ ಮಾಡಿ

ನಗರದ ರಸ್ತೆಗಳಲ್ಲಿ ನೀರಿನ ಸೋರಿಕೆ ಕಂಡು ಬಂದರೆ 1916 ದೂರವಾಣಿ ಸಂಖ್ಯೆ ಹಾಗೂ ವಾಟ್ಸ್‌ಆಪ್ ಸಂಖ್ಯೆಗೆ 8762228888 ಮೂಲಕ ಜಲಮಂಡಳಿಗೆ ಮಾಹಿತಿ ನೀಡುವಂತೆ ಮನವಿ ಮಾಡಿದೆ.



ನೀರಿನ ಅಭಾವ ಉಂಟಾಗುವುದು ತಪ್ಪಿಸಲು ಜನರು ಕಾವೇರಿ ನೀರನ್ನು ಮಿತವಾಗಿ ಬಳಸಬೇಕು. ಕಾವೇರಿ ನೀರನ್ನು ಕುಡಿಯಲು ಹಾಗೂ ಗೃಹ ಬಳಕೆಗೆ ಮಾತ್ರ ಬಳಸಿಕೊಳ್ಳಬೇಕು. ಇನ್ನಿತರ ಕಾರ್ಯಗಳಿಗೆ ಕೊಳವೆ ಬಾವಿ ನೀರು ಮತ್ತು ತ್ಯಾಜ್ಯ ನೀರು ಘಟಕಗಳಿಂದ ಸಂಸ್ಕರಿಸಿದ ನೀರನ್ನು ಬಳಸಬೇಕು. ನೆಲತೊಟ್ಟಿ ಮತ್ತು ಜಲಸಂಗ್ರಹಾರ ತೊಟ್ಟಿಗಳಲ್ಲಿ ಹಾಗೂ ನಲ್ಲಿಗಳಲ್ಲಿ ನೀರು ಸೋರಿಕೆ ಆಗದಂತೆ ಕ್ರಮ ವಹಿಸಬೇಕು ಎಂದು ಕೋರಿದೆ.

ವಿಜಯ ಕರ್ನಾಟಕ

ದಿನಾಂಕ 16/03/2023

# ಮಿತವಾಗಿ ನೀರು ಬಳಸಲು ಮನವಿ

■ **ವಿಕ ಸುದ್ದಿಲೋಕ** ಬೆಂಗಳೂರು

ಬೇಸಿಗೆ ಪ್ರಾರಂಭವಾಗಿದ್ದು, ಬಿಸಿಲಿನ ಪ್ರಮಾಣ ಹೆಚ್ಚಾಗಿರುವ ಕಾರಣ ಕಾವೇರಿ ನೀರು ಸರಬರಾಜಿನಲ್ಲಿ ಕೊರತೆ ಎದುರಾಗುವ ಸಾಧ್ಯತೆ ಇರುವುದರಿಂದ ಸಾರ್ವಜನಿಕರು ಮಿತವಾಗಿ ನೀರಿನ ಬಳಕೆ ಮಾಡಬೇಕು ಎಂದು ಜಲಮಂಡಳಿ ಮನವಿ ಮಾಡಿದೆ.

ಜಲಮಂಡಳಿಯು ನಿತ್ಯ ನಗರಕ್ಕೆ 1450 ದಶಲಕ್ಷ ಲೀಟರ್ ಕುಡಿಯುವ ನೀರು ಪೂರೈಸುತ್ತಿದೆ. ಬೇಸಿಗೆಯಿಂದಾಗಿ ನೀರಿನ ಅಭಾವ ಎದುರಾಗುವ ಸಾಧ್ಯತೆಯಿದೆ. ಆದರಿಂದಾಗಿ ನಗರದಲ್ಲಿ ನೀರಿನ ಕೊರತೆ ಉಂಟಾಗುವ ಪ್ರದೇಶಗಳಿಗೆ ಮಂಡಳಿಯ ಸುಪರ್ದಿಯಲ್ಲಿರುವ 68 ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡಲಾಗುವುದು.

ಜತೆಗೆ ಮಂಡಳಿ ನಿರ್ವಹಣೆ ಮಾಡುತ್ತಿರುವ 10,710 ಸಾರ್ವಜನಿಕ ಕೊಳವೆ ಬಾವಿಗಳಿಂದ ಅಧಿಕ ನೀರು ಸರಬರಾಜು ಮಾಡಲಾಗುತ್ತಿದೆ. ಮಂಡಳಿಯಲ್ಲಿರುವ 35 ಉಪ ವಿಭಾಗಗಳಿಗೆ ನೀರು ಸರಬರಾಜು ಮೇಲ್ವಿಚಾರಣೆಗಾಗಿ ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ. ಸಾರ್ವಜನಿಕರ ನೀರಿನ ಸಮಸ್ಯೆಗಳನ್ನು ಈ ಅಧಿಕಾರಿಗಳು ಪರಿಹರಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

### ಜಲಮಂಡಳಿ ಕೋರಿಕೆ

- ಕಾವೇರಿ ನೀರು ಮಿತವಾಗಿ ಬಳಸಬೇಕು
- ಕಾವೇರಿ ನೀರನ್ನು ಗೃಹ ಬಳಕೆಗೆ ಮಾತ್ರ ಬಳಸಬೇಕು, ಇತರೆ ಕಾರ್ಯಗಳಿಗೆ ಕೊಳವೆ ಬಾವಿ ನೀರು ಮತ್ತು ತ್ಯಾಜ್ಯ ಸಂಸ್ಕರಿಸಿದ ನೀರು ಬಳಸಬೇಕು
- ನಿವೇಶನಗಳಲ್ಲಿನ ತೊಟ್ಟಿ, ಜಲಸಂಗ್ರಹಾರಗಳು ಹಾಗೂ ನಲ್ಲಿಗಳಲ್ಲಿ ನೀರು ಸೋರಿಕೆ ತಡೆಗಟ್ಟಬೇಕು
- ಕಾವೇರಿ ನೀರನ್ನು ಶೌಚಾಲಯ, ತೋಟಗಾರಿಕೆ, ವಾಹನ ಶುಚಿಗೊಳಿಸಲು ಬಳಸದಂತೆ ನಿಗಾ ವಹಿಸಬೇಕು
- ರಸ್ತೆಯಲ್ಲಿ ನೀರು ಸೋರಿಕೆ ಕಂಡು ಬಂದರೆ ಕೂಡಲೇ 1916, ವಾಟ್ಸ್ ಆ್ಯಪ್ ಸಂಖ್ಯೆ 8762228888 ಕ್ಕೆ ಕರೆ ಮಾಡಿ ತಿಳಿಸಬೇಕು



THE HINDU
Date 17/3/23

# BWSSB to supply water in 68 tankers during summer

As Bengaluru is feeling the pangs of water shortage even before summer has peaked and foreseeing the possibility of shortage of supply of drinking water, the Bangalore Water Supply and Sewerage Board (BWSSB) will supply water with the help of 68 tankers to areas facing shortage in the city. Apart from this, about 10,710 public tube wells will be maintained by the board and water will be supplied in excess. The BWSSB said all measures have been taken to face the shortage of drinking water in summer. It has also urged consumers to use Cauvery water sparingly. The board also said that in case of water leakage on the road, it should be immediately reported to BWSSB through 1916 telephone number or WhatsApp number: 8762228888, a release stated.

ಸಂಯುಕ್ತ ಕರ್ನಾಟಕ
ದಿನಾಂಕ 17/3/23

# ಜಲ ಪಾರಂಪರಿಕ ಪಟ್ಟಿಗೆ 5 ಜಲಮೂಲ ಸೇರ್ಪಡೆ

ಬೆಂಗಳೂರು: ದೇಶದ 75 ಜಲ ಪಾರಂಪರಿಕ ತಾಣಗಳ ಪಟ್ಟಿಗೆ ರಾಜ್ಯದ 5 ಜಲ ಮೂಲಗಳು ಸೇರ್ಪಡೆಯಾಗಿವೆ. ಈ 5 ಜಲ ಮೂಲಗಳು ಸುಮಾರು 100 ವರ್ಷಗಳ ಇತಿಹಾಸ ಹೊಂದಿವೆ. ಜಲ ಪಾರಂಪರಿಕ ತಾಣಗಳ ಪಟ್ಟಿಗೆ 1500 ಎಕರೆ ವಿಸ್ತೀರ್ಣದಲ್ಲಿ ನಿರ್ಮಾಣ ಮಾಡಲಾಗಿರುವ ಹೆಸರಘಟ್ಟ ಕೆರೆ ಜಲ ಪಾರಂಪರಿಕ ಪಟ್ಟಿಗೆ ಸೇರಿದೆ. ಜಲ ಶಕ್ತಿ ಸಚಿವಾಲಯದ ಪ್ರಕಾರ, ಶಾಸನಗಳ ಆಧಾರದ ಮೇಲೆ, ಹೆಸರಘಟ್ಟ ಕೆರೆ 12ನೇ ಶತಮಾನದಲ್ಲಿ ನಿರ್ಮಿಸಲಾಗಿದೆ. ಇದು ಬೆಂಗಳೂರಿನ ಹೆಸರಘಟ್ಟದಲ್ಲಿದೆ. ಇದನ್ನು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ನಿರ್ವಹಣೆ ಮಾಡುತ್ತಿದೆ.

ಚಿಕ್ಕಮಗಳೂರು ಜಿಲ್ಲೆಯ ಮದಗಾದ ಕೆರೆ ಮತ್ತೊಂದು ಜಲ ಪಾರಂಪರಿಕ ತಾಣವಾಗಿದೆ. ಈ ಕೆರೆಗೆ ಬಾಬಾಬುಡನ್ ಗಿರಿ ಬೆಟ್ಟಗಳಿಂದ ನೀರು ಹರಿದುಬಂದು ಶೇಖರಣೆಯಾಗುತ್ತದೆ. ಇದರಿಂದ ಕೆರೆ ಸದಾ ತುಂಬಿರುತ್ತದೆ. ಈ ಕೆರೆಯನ್ನು 500 ವರ್ಷಗಳ ಹಿಂದೆ ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ನಿರ್ಮಿಸಲಾಗಿತ್ತು ಎನ್ನಲಾಗುತ್ತಿದೆ.

ಮೂರನೇಯದಾಗಿ ಕೋಲಾರದ ಚೋಳನಕುಂಟೆ ಕೆರೆಯನ್ನು ಕ್ರಿಶ 11ನೇ ಶತಮಾನದಲ್ಲಿ ಚೋಳರು ನಿರ್ಮಿಸಿದ್ದಾರೆ. ಈ ಕೆರೆ ಕೂಡ ಜಲ ಪಾರಂಪರಿಕ ತಾಣ ಪಟ್ಟಿಗೆ ಸೇರಿದೆ. ನಾಲ್ಕನೆಯದಾಗಿ ತುಂಗಭದ್ರಾ ನದಿಗೆ ನಿರ್ಮಿಸಲಾಗಿರುವ ವಿಜಯನಗರ ಕಾಲುವೆ ಜಲ ಪಾರಂಪರಿಕ ತಾಣ ಪಟ್ಟಿಗೆ ಸೇರಿದೆ. 215 ಕಿಮೀ ಉದ್ದ ಕಾಲುವೆ ಬಳ್ಳಾರಿ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳಿಗೆ ನೀರು ಸರಬರಾಜು ಮಾಡುತ್ತದೆ. ಈ ಕಾಲುವೆಯಿಂದ 16,242 ಹೆಕ್ಟೇರ್ ಭೂ ಪ್ರದೇಶಕ್ಕೆ ನೀರು ಪೂರೈಕೆಯಾಗುತ್ತದೆ. ಸುಮಾರು 400 ವರ್ಷಗಳ ಹಿಂದೆ ವಿಜಯನಗರ ಸಾಮ್ರಾಜ್ಯದ ರಾಜರು ಈ ಕಾಲುವೆಯನ್ನು ನಿರ್ಮಾಣ ಮಾಡಿದ್ದಾರೆ.

ಐದನೆಯದಾಗಿ ಬಾಗಲಕೋಟೆ ಜಿಲ್ಲೆ ಐಹೊಳೆಯಲ್ಲಿರುವ ದೊಡ್ಡ ದುರ್ಗಾ ದೇವಾಲಯದ ಆವರಣದಲ್ಲಿರುವ ಮೆಟ್ಟಿಲುಬಾವಿ, ಜಲ ಪಾರಂಪರಿಕ ಪಟ್ಟಿಗೆ ಸೇರ್ಪಡೆಯಾಗಿದೆ. ದೇವಾಲಯವನ್ನು ಭಾರತೀಯ ಪುರಾತತ್ವ ಇಲಾಖೆ ಸಂರಕ್ಷಿಸುತ್ತಿದೆ.